O.S.No.:373/2018
D.W.:1

ಈ ದಿನ ದಿ:10.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು:- ವಾದಿ ಪರ ವಕೀಲರಾದ ಶ್ರೀ ಪಿ.ಎಸ್.ಆರ್ ರವರಿಂದ:-</u>

1. ಈ ದಾವೆಯನ್ನು ಸರ್ವೆ ನಂ.211/3ರ ಜಮೀನಿಗೆ ಸಂಬಂಧಿಸಿದಂತೆ ಹೂಡಿರುತ್ತಾರೆ. ದಾವಾಸ್ವತ್ತು 1ಎಕರೆ 14 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ದಾವಾಸ್ವತ್ತನ್ನು ವಾದಿಯು ದಿನಾಂಕ.08.03.1990ರಲ್ಲಿ ಮಾಲಿಗೇಗೌಡ ಎನ್ನುವವರಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಕ್ರಯಪತ್ರದ ಆಧಾರದ ಮೇಲೆ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಖಾತೆಯು ವಾದಿಯ ಹೆಸರಿಗೆ ಎಂ.ಆರ್ ನಂ.4/1990-1991ರಂತೆ ಆಗಿರುತ್ತದೆ ಎಂದರೆ ಸರಿ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಯು ಸಹ ವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಕ್ರಯದಿನದಿಂದಲ್ಲೂ ದಾವಾಸ್ವತ್ತಿನಲ್ಲಿ ವಾದಿಯೇ ಸ್ವಾಧೀನಾನುಭವದಲ್ಲಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರ ಜಮೀನಿನಲ್ಲಿ ಅವರು ಇರುತ್ತಾರೆ ಎಂದು ನುಡಿಯುತ್ತಾರೆ. ದಾವಾಸ್ವತ್ತನ್ನು ವಾದಿಯೇ ಅನುಭವಿಸಿಕೊಂಡು ಅದಕ್ಕೆ ಸಂಬಂಧಿಸಿದಂತೆ ಕಂದಾಯವನ್ನು ಸಹ ಕಟ್ಟುತ್ತಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕಂದಾಯ ಕಟ್ಟುತ್ತಿರುವ ಬಗ್ಗೆ ನನಗೆ ಮಾಹಿತಿ ಇಲ್ಲ, ಆದರೆ ಅವರು ಅನುಭವದಲ್ಲಿರುವುದು ಮಾತ್ರ ನನಗೆ ಗೊತ್ತು ಎಂದು ನುಡಿಯುತ್ತಾರೆ.

2. ದಾವಾಸ್ವತ್ತಿನಲ್ಲಿ ವಾದಿ ಮತ್ತು ಅವರ ಕುಟುಂಬಸ್ಥರು ರಾಗಿ, ಕಡಲೆಕಾಯಿ, ತೋಗರಿ ಮತ್ತು ಇತರೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಎಂದರೆ ಸಾಕ್ಷಿಯು ಯಾವ ಬೆಳೆ ಬೆಳೆಯುತ್ತಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಿನಾಂಕ.22.09.2018ರಂದು ಮಧ್ಯಾಹ್ನ 12.00ಗಂಟೆ ಸಮಯಕ್ಕೆ ನಾನು ನನ್ನ ಇತರೆ ಸಹಚರರೊಂದಿಗೆ ಶ್ಯಾಮಿಲಾಗಿ ದಾವಾಸ್ವತ್ತಿಗೆ ಅಕ್ರಮವಾಗಿ ಅತಿಕ್ರಮ ಪ್ರವೇಶ ಮಾಡಿ ದಾವಾಸ್ವತ್ತಿನಲ್ಲಿರುವ ಬೆಳೆಯನ್ನು ನಾಶಪಡಿಸಲು ಮತ್ತು ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆ ಕೊಡಲು ಪ್ರಯತ್ನ ಪಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ನಾನು ಕಲ್ಲು ಕಂಬವನ್ನು ನೆಡಲು ಪ್ರಯತ್ನವನ್ನು ಸಹ ಪಟ್ಟಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ನನ್ನನ್ನು ಮತ್ತು ನನ್ನ ಸಹಚರರನ್ನು ಆಜುಬಾಜಿನ ಮಾಲೀಕರ ಸಹಾಯದಿಂದ ಆ ದಿನ ತಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ನನ್ನ ಜಮೀನಿನಲ್ಲಿ ಕಲ್ಲುಕಂಬ ಹಾಕಲು ಹೋಗಿದ್ದೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ನಾನು ಪದೇ ಪದೇ ವಿನಾಃ ಕಾರಣ ತೊಂದರೆ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತನ್ನು ಹೊಡೆದುಕೊಳ್ಳುವ ದುರುದ್ದೇಶದಿಂದ ನಾನು ಅನಾವಶ್ಯಕವಾಗಿ ವಾದಿಗೆ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

3. ನಾನು ವಾದಿಯ ಸ್ವಾಧೀನಾನುಭವ ಕ್ಕೆ ತೊಂದರೆ ಕೊಟ್ಟ ಕಾರಣಕ್ಕೆ ವಾದಿಯು ನನ್ನ ವಿರುದ್ದ ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರನ್ನು ಸಹ

ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಪೊಲೀಸರ ಮೇಲೆ ಪ್ರಭಾವ ಬೀರಿದ್ದಕ್ಕಾಗಿ ವಾದಿಯು ಕೊಟ್ಟ ದೂರಿನ ಆಧಾರದ ಮೇಲೆ ಪೊಲೀಸರು ನನ್ನ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ವಿರುದ್ದ ಕ್ರಮ ಕೈಗೊಳ್ಳದೆ ಇರುವಾಗ ವಾದಿಯು ನನ್ನ ವಿರುದ್ದ ದೂರನ್ನು ಎಸ್.ಪಿ ರವರಿಗೆ ಮತ್ತು ಡಿ.ವೈ.ಎಸ್.ಪಿ ರವರಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ನನ್ನ ವಿರುದ್ದ ದೂರು ಕೊಟ್ಟ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮೇಲೆ ಪ್ರಭಾವ ಬೀರಿರುವ ಕಾರಣಕ್ಕೆ ಅವರು ನನ್ನ ವಿರುದ್ದ ಯಾವುದೇ ಕ್ರಮಕ್ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ಮಾಜಿ ಪುರಸಭೆಯ ಅಧ್ಯಕ್ಷರು ಎಂದರೆ ಸರಿ. ನಾನು ಈಗ ಸರ್ಕಾರದ ಗ್ಯಾರೆಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷರು ಎಂದರೆ ಸರಿ. ನಾನು ಕಾಂಗ್ರೇಸ್ ಪಕ್ಷದ ನಾಯಕ ಎಂದರೆ ಸರಿ. ನಾನು ಕಳೆದ 23ವರ್ಷಗಳಿಂದ ಕಾಂಗ್ರೇಸ್ ಪಕ್ಷಕ್ಕೆ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಕನಕಪುರದ ಯುತ್ ಕಾಂಗ್ರೇಸ್ ಪಕ್ಷದ ಅಧ್ಯಕ್ಷನಾಗಿದ್ದೆ ಎಂದರೆ ಸರಿಯಲ್ಲ.

5. ವಾದಿಯು ನಿಮ್ಮ ತಂದೆಯ ಜಮೀನಿಗೆ ಸಂಬಂಧಿಸಿದಂತೆ ಅವರ ಸ್ವಾಧೀನಾನುಭವಕ್ಕೆ ತೊಂದರೆ ಕೊಟ್ಟ ಬಗ್ಗೆ ಮತ್ತು ನಿಮ್ಮ ತಂದೆಯ ಜಮೀನನ್ನು ಒತ್ತುವರಿ ಮಾಡಿಕೊಳ್ಳಲು ಪ್ರಯತ್ನಪಟ್ಟ ಬಗ್ಗೆ ನೀವು ಏನಾದರೂ ವಾದಿಯ ವಿರುದ್ದ ದೂರು ಸಲ್ಲಿಸಿದ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು, ಸಲ್ಲಿಸಿದ್ದೆ

ಎಂದು ನುಡಿಯುತ್ತಾರೆ. ವಾದಿಯ ವಿರುದ್ಧ ದೂರು ಸಲ್ಲಿಸಿದ್ದೆ ಎಂದು ತೋರಿಸಲು ನಾನು ಈ ದಾವೆಯಲ್ಲಿ ದಾಖಲೆಯನ್ನು ಹಾಜರುಪಡಿಸಿದ್ದೇನೋ ಇಲ್ಲವೋ ನನಗೆ ಈಗ ನೆನಪಿಲ್ಲ. ವಾದಿಯು ಯಾವತ್ತು ನಮ್ಮ ತಂದೆಯ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ತೊಂದರೆ ಕೊಟ್ಟಿಲ್ಲ ಮತ್ತು ಯಾವತ್ತು ನಮ್ಮ ತಂದೆಯ ಜಮೀನನ್ನು ಒತ್ತುವರಿ ಮಾಡಿಕೊಳ್ಳಲು ಪ್ರಯತ್ನಪಟ್ಟಿಲ್ಲ ಎಂದರೆ ಸರಿಯಲ್ಲ.

6. ನಿಡಿ-1ರ ಪ್ರಕಾರ ಅದರಲ್ಲಿ ನಮೂದಿಸಿದ ಆಸ್ತಿಯ ಯಾವ ದಿಕ್ಕಿಗೂ ವಾದಿಗೆ ಸಂಬಂಧಿಸಿದ ಜಮೀನು ಬರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಆಸ್ತಿಯ ಪೂರ್ವಕ್ಕೆ ವಾದಿಯ ಜಮೀನು ಬರುತ್ತದೆ ಆದರೆ ಆ ದಾಖಲೆಯಲ್ಲಿ ನಮೂದಿಸಿಲ್ಲ ಎಂದು ನುಡಿಯುತ್ತಾರೆ. ಒಂದು ವೇಳೆ ವಾದಿಯ ಜಮೀನು ನಿಡಿ-1ರಲ್ಲಿ ಮಾರಾಟ ಮಾಡಿದ ಜಮೀನಿನ ಚಕ್ಕುಬಂದಿಯಲ್ಲಿ ಬರುತ್ತಿದ್ದದ್ದೆ ಆಗಿದ್ದರೆ ಅದರ ಬಗ್ಗೆ ಆ ದಾಖಲೆಯಲ್ಲಿ ನಮೂದಿಸುತ್ತಿದ್ದರು, ಅಲ್ಲಿ ವಾದಿಯ ಜಮೀನು ಬಾರದೆ ಇರುವ ಕಾರಣಕ್ಕೆ ಚಕ್ಕುಬಂದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ವಾದಿಯ ಜಮೀನು ನಿಡಿ-1ರಲ್ಲಿ ನಮೂದಿಸಿದ ಆಸ್ತಿಯ ಚಕ್ಕುಬಂದಿಯಲ್ಲಿ ಬರುವುದಿಲ್ಲ ಎಂಬ ವಿಚಾರ ನನಗೆ ಗೊತ್ತಿದ್ದರು ವಾದಿಯ ಜಮೀನು ಪೂರ್ವಕ್ಕೆ ದಿಕ್ಕಿಗೆ ಬರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ನಿಡಿ-2ರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಿಡಿ-2ರ ಡಿ ಷೆಡ್ಯೂಲ್ ಸ್ವತ್ತಿನಲ್ಲಿ ನಮೂದಿಸಿದ ಕೆ.ಬಿ ನಾಗರಾಜು ರವರು ನನ್ನ ತಂದೆ ಎಂದರೆ ಸರಿ. ನಿಡಿ-2ರಂತೆ ದಾಖಲೆ ಆಗುವ ಕಾಲಕ್ಕೆ ಆ ದಾಖಲೆಯಲ್ಲಿ ನಮೂದಿಸಿದ ಡಿ ಷೆಡ್ಯೂಲ್ ಸ್ವತ್ತಿನ ಜಮೀನುಗಳ ಆಜುಬಾಜುದಾರರ ಬಗ್ಗೆ ನಮಗೆ ಸಂಪೂರ್ಣ ಮಾಹಿತಿ ಇತ್ತು ಎಂದರೆ ಸರಿ. ನಿಡಿ-2ರ ಡಿ ಷೆಡ್ಯೂಲ್ ಸ್ವತ್ತಿನ ಕ್ರಮಸಂಖ್ಯೆ 1ರಲ್ಲಿ ನಮೂದಿಸಿದ ಸರ್ವೆ ನಂ.250ರ ಜಮೀನಿನ ಚಕ್ಕುಬಂದಿಯಲ್ಲಿ ವಾದಿಯ ಹೆಸರನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು ಸರ್ವೆ ನಂ.211 ಎಂದು ಪೂರ್ವ ದಿಕ್ಕಿಗೆ ನಮೂದಿಸಿರುತ್ತೇವೆ, ಸರ್ವೆ ನಂ.211ರಲ್ಲಿ ಒಟ್ಟು ನಾಲ್ಕು ಜನರಿಗೆ ಜಮೀನು ಇರುತ್ತದೆ, ಹಾಗಾಗಿ ನಾವು ಸಂಪೂರ್ಣ ಸರ್ವೆ ನಂಬರ್ ನ್ನು ಪೂರ್ವ ದಿಕ್ಕಿಗೆ ನಮೂದಿಸಿರುತ್ತೇವೆ ಎಂದು ನುಡಿಯುತ್ತಾರೆ. ಸರ್ವೆ ನಂ.250ರ ಜಮೀನಿನ ಪೂರ್ವಕ್ಕೆ ಹೊಂದಿಕೊಂಡಂತೆ ವಾದಿಯ ಜಮೀನು ಇದ್ದಿದ್ದರೆ ಅಲ್ಲಿ ವಾದಿಯ ಜಮೀನು ಬರುತ್ತದೆ ಎಂದು ಬರೆಯುತ್ತಿದ್ದೆವು, ಅಲ್ಲಿ ವಾದಿಯ ಜಮೀನು ಇಲ್ಲದೆ ಇರುವ ಕಾರಣಕ್ಕೆ ವಾದಿಯ ಹೆಸರನ್ನು ಪೂರ್ವ ದಿಕ್ಕಿಗೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಡಿ-2ರ ಡಿ ಷೆಡ್ಯೂಲ್ ಸ್ವತ್ತಿನ ಕ್ರಮಸಂಖ್ಯೆ 2ರಲ್ಲಿ ನಮೂದಿಸಿದ ಸರ್ವೆ ನಂ.597ರ ಜಮೀನಿನ ಯಾವ ದಿಕ್ಕಿಗೂ ವಾದಿಗೆ ಸಂಬಂಧಿಸಿದ ಜಮೀನು ಬರುವುದಿಲ್ಲ ಎಂದರೆ ಸರಿ. ಸರ್ವೆ ನಂ.211ರಲ್ಲಿ ಮೂರು ಪೋಡಿಗಳು ಇವೆ ಎಂದರೆ ಸರಿ. ವಾದಿ ಮತ್ತು ನಮ್ಮ ಜಮೀನಿನ ಮಧ್ಯ ಸರ್ವೆ ನಂ.211ರ 2ನೇ ಪೋಡಿ ಬರುತ್ತದೆ ಎಂದರೆ ಸರಿ.

8. ನಿಡಿ-3ರಲ್ಲಿ ನಮೂದಿಸಿದ ಆಸ್ತಿಯ ಯಾವ ದಿಕ್ಕಿಗೂ ವಾದಿಗೆ ಸಂಬಂಧಿಸಿದ ಜಮೀನು ಬರುವುದಿಲ್ಲ ಎಂದರೆ ಸರಿ.

ನಾನು ಈ ದಾವೆಯಲ್ಲಿ ವಾದಿ ಇದ್ದು, ನನ್ನ ಮುಖ್ಯ ವಿಚಾರಣೆಯ ಬದಲಾಗಿ ನಾನು ನನ್ನ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳನ್ನು ನಾನು ನನ್ನ ವಕೀಲರಿಗೆ ಹೇಳಿ, ಬರೆಯಿಸಿ, ಓದಿಸಿ ತಿಳಿದುಕೊಂಡು ಮನಗೊಂಡ ನಂತರ ಸಹಿ ಮಾಡಿರುತ್ತೇನೆ. ನನ್ನ ಪ್ರಮಾಣಪತ್ರದಲ್ಲಿರುವ ಎಲ್ಲಾ ವಿಷಯಗಳು ನಿಜ ಮತ್ತು ಸತ್ಯಸಂಗತಿಗಳಾಗಿರುತ್ತವೆ.

ಪಿ.ಡಬ್ಲ್ಯೂ -1 ರವರ ಮುಖ್ಯವಿಚಾರಣೆಯ ಸಾಕ್ಷ್ಯದಲ್ಲಿ ಗುರುತಿಸಲ್ಪಟ್ಟ ದಾಖಲೆಗಳನ್ನೆ ನನ್ನ ಮುಖ್ಯವಿಚಾರಣೆಯಲ್ಲಿಯು ಗುರುತಿಸಬೇಕಾಗಿ ಕೋರುತ್ತೇನೆ.

ದಿನಾಂಕ.23.04.1990ರ ನೋಂದಾಯಿತವಲ್ಲದ ಅದಲುಬದಲು ಪಂಚಾಯಿತಿ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಯನ್ನು ನಿಶಾನೆಯನ್ನಾಗಿ ಗುರುತಿಸಲು 6ನೇ ಪ್ರತಿವಾದಿ ಪರ ವಕೀಲರು ತಕರಾರು ಸಲ್ಲಿಸಿರುತ್ತಾರೆ. ಅದ್ದರಿಂದ ಸದರಿ ದಾಖಲೆಯ ಗುರುತಿಸುವಿಕೆಗೆ ಸಂಬಂಧಿಸಿದಂತೆ ತಮ್ಮ ವಾದವನ್ನು ಮಂಡಿಸುವಂತೆ ಉಭಯ ಪಕ್ಷಗಾರರಿಗೆ

ಕಾಲಾವಕಾಶ ನೀಡಿ ಮುಂದುವರೆದ ಮುಖ್ಯವಿಚಾರಣೆ ಮುಂದುಡಲಾಯಿತು.

ವಾದಿ ಪರ ವಕೀಲರು ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೇಳಿದ್ದು, ಆಲಿಸಿ ಕಾಲಾವಕಾಶ ನೀಡಲಾಯಿತು.

**ಪಾಟೀ ಸವಾಲುಃ-**

ಪ್ರತಿವಾದಿಯು ಏಕಪಕ್ಷಿಯವಾಗಿರುವುದರಿಂದ ಪ್ರಾಸಾ-1 ರವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿ ಮತ್ತು ಪ್ರತಿವಾದಿ ಪರ ವಕೀಲರು ಗೈರು ಹಾಜರಿರುವುದರಿಂದ ಪ್ರಾಸಾ-1 ರವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿ ಪರ ವಕೀಲರು ಪ್ರಾಸಾ-1 ರವರ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಯಾವುದೇ ಸಕಾರಣಗಳು ಇಲ್ಲದ ಕಾರಣ ಪ್ರಾಸಾ-1 ರವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸದಿರುವ ಕಾರಣ ಪ್ರಾಸಾ-1 ರವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಆಲಿಸಿ ಕಾಲಾವಕಾಶ ನೀಡಲಾಯಿತು.

**ಮರುವಿಚಾರಣೆಃ- ಇಲ್ಲ.**

O.S.No.:373/2018
D.W.:1

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**